ರಾಮರಾವ್ ಅವರ ದುಗುಡ ತುಂಬಿದ ಆಹ್ವಾನವನ್ನು ತಿರಸ್ಕರಿಸಿದಂತೆ ನಿಂತಿದ್ದ ಜಾಗದಿಂದಲೇ ಡಾ.ವಿನ್ನಿ ಕೂಗತೊಡಗಿದ್ದರು. 'ಮರಗಿಡಗಳನ್ನು ಬೆಳೆಸಬೇಕು ಅನ್ನುವವರು ಅವುಗಳ ಮೆಂಟೆನೆನ್ಸ್ ಕೂಡಾ ಕಾಲಕಾಲಕ್ಕೆ ಮಾಡುವುದನ್ನು ತಿಳಿದಿರಬೇಕು. ಅವುಗಳ ಕಸಕಡ್ಡಿ ಪಕ್ಕದ ಮನೆಗೆ ಬೀಳುತ್ತದೆ ಮತ್ತು ಅದು ಅವರಿಗೆ ಹೊರೆಯಾಗುತ್ತದೆ ಎನ್ನುವ ಸಾಮಾನ್ಯ ಜ್ಞಾನ ಕೂಡಾ ನಿಮಗೆ ಇಲ್ಲವೇ' ಎನ್ನುವಂತಹ ಅಘಾತಕಾರಿ ಬೈಗುಳ ಅವರ ಬಾಯಿಂದ ಬರಲು ಪ್ರಾರಂಭವಾದದ್ದನ್ನು ಕಂಡು ನಿರ್ಮಲಾ ಅವರು ಡಾ.ವಿನ್ನಿಯವರನ್ನು ಸಮಾಧಾನಿಸಿ ಮನೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿದರು. ರಾಮರಾವ್ ಅವರು ದಿಗಿಲಿನಿಂದ ಓಡಿಬಂದು ಕ್ಷಮೆಯಾಚಿಸಿ, 'ಡಾ.ವಿನ್ನಿಯವರೆ ನಿಮಗೆ ತೊಂದರೆಯಾಗಿದ್ದರೆ, ಕ್ಷಮಿಸಿ, ಅಮ್ಮನ ಅನಾರೋಗ್ಯ, ಆಪೆರೇಷನ್ ಇತ್ಯಾದಿ ಒತ್ತಡದಿಂದ ಆ ಕೆಲಸಗಳೆಲ್ಲ ಹಾಗೆಯೇ ಉಳಿದುಬಿಟ್ಟಿತು. ನಿಮಗೆ ತೊಂದರೆ ಕೊಡುವ ಯಾವ ಉದ್ದೇಶವೂ ನಮಗೆ ಇಲ್ಲ. ನಾಳೆಯೇ ಮಾಡಿಸುತ್ತೇನೆ' ಎಂದು ವಿನಯಭರಿತ ಧ್ವನಿಯಲ್ಲಿ ನೀಡಿದ ಆಶ್ವಾಸನೆ ಡಾ.ವಿನ್ನಿಯವರ ಕಿವಿ ಮತ್ತು ಮನಸ್ಸನ್ನು ತಲುಪಲೇ ಇಲ್ಲ.

ಅದಕ್ಕೆ ಬದಲಾಗಿ ಅವರು ತಮ್ಮ ಮಾತಿನ ಪ್ರಹಾರವನ್ನು ಅಲ್ಲಿಗೆ ನಿಲ್ಲಿಸದೇ 'ಕಸವೆಲ್ಲ ಪಕ್ಕದ ಮನೆಗೆ ಬೀಳುತ್ತಿದ್ದರೆ ನೆಪ ಹೇಳದೆ ಏನು ಮಾಡುತ್ತೀರಿ' ಎಂದು ಚುಚ್ಚಿ ನುಡಿದ ಮಾತು ರಾಮರಾವ್ ಅವರ ಮನಸ್ಸಿಗೇ ನಾಟಿದಂತಾಯಿತು. ತುಸು ಬೇಸರದಿಂದ 'ನಮ್ಮ ಮನೆಯ ಹಿತ್ತಲಿಗೂ ಪಕ್ಕದ ಮನೆಯ ಗಿಡಗಳ ಕಸಗಳು ಉದುರುತ್ತವೆ, ಆದರೆ ನಾವೆಂದೂ ಹೀಗೆ ಅವರ ಮನೆಗೆ ಹೋಗಿ ಗಲಾಟೆ ಮಾಡಿಲ್ಲ. ಈ ಬಾರಿ ನಮ್ಮಿಂದ ತಪ್ಪಾಗಿದೆ, ಕ್ಷಮೆ ಇರಲಿ. ಇನ್ನು ಹಾಗೆ ಆಗದೆ ಇರುವ ಹಾಗೆ ನೋಡಿಕೊಳ್ಳುತ್ತೇವೆ' ಎನ್ನುವ ಅವರ ವಿನಯ ಇವರ ಅಹಂಕಾರಕ್ಕೆ ಮತ್ತಷ್ಟು ಬಲ ಕೊಟ್ಟಿತು. ಅದಕ್ಕೆ ಪ್ರತಿಯಾಗಿ ಡಾ.ವಿನ್ನಿ ಇನ್ನೂ ಜೋರು ಧ್ವನಿಯಲ್ಲಿ ಕೂಗಾಡಲು ಪ್ರಾರಂಭಿಸಿದರು 'ನಿಮ್ಮ ಪ್ರಕಾರ ನೀವು ಮರ-ಗಿಡ ನೆಟ್ಟಿರುವುದೇ ಪಕ್ಕದವರಿಗೆ ತೊಂದರೆ ಕೊಡಲು, ಮತ್ತು ಅದನ್ನು ಪಕ್ಕದ ಮನೆಯವರು ಸಹಿಸಬೇಕು. ಏನನ್ನೂ ಹೇಳಬಾರದು ಎಂದೋ' ಎಂಬ ಅವರ ವ್ಯಂಗ್ಯ, ಸಮಾಧಾನಿಯಾದ ರಾಮರಾವ್ ಅವರನ್ನೂ ತುಸು ಕೆರಳಿಸಿತು.

ಮಾತಿಗೆ ಮಾತು ಬೆಳೆದು ನಾಲ್ಕಾರು ಮನೆಗಳಿಗೆ ಕೇಳಿಸುವಂತಾಯಿತು, ಮೈ-ಕೈ ಮಿಲಾಯಿಸುವ ವರೆಗೂ ಮುಂದುವರಿಯಿತು. ಇವರ ಜಗಳ ಅತಿರೇಕಕ್ಕೆ ಹೋಗುತ್ತಿರುವದನ್ನು ಕಂಡ ಅವರಲ್ಲೊಬ್ಬ ಮನೆಯವರು ಬಂದು ಗೌರವಾನ್ವಿತರು ವಾಸಿಸುವ ಈ ನಮ್ಮ ಏರಿಯಾದಲ್ಲಿ ಹೀಗೆ ಬೀದಿ ರಂಪ ಮಾಡುತ್ತಿರುವುದರಿಂದ ಎಲ್ಲರಿಗೂ ತೊಂದರೆ ಆಗುತ್ತಿದೆ. ಇದು ಇನ್ನೂ ಮುಂದುವರಿದರೆ ನಾವೆಲ್ಲ ಹೋಗಿ ಪೋಲಿಸ್ ಕಂಪ್ಲೇಂಟ್ ಕೊಡುತ್ತೇವೆ ಎಂದಾಗ ಡಾ.ವಿನ್ನಿ ಮೆತ್ತಗಾಗಿದ್ದರು. ಹೀಗೆ ಮಟ ಮಟ ಮಧ್ಯಾಹ್ನ ಕಾವೇರಿದ ಇವರ ಮಾತುಕತೆಯಲ್ಲಿ ತಮ್ಮ ಬೇಳೆ ಬೇಯಿಸಿಕೊಂಡ ಜನರು ತಮ್ಮ ತಮ್ಮ ಮನೆಗೆ ಊಟ ಮಾಡಲು ಹೊರಟರು. ಡಾ.ವಿನ್ನಿಯವರನ್ನು ಅವರ ಪತ್ನಿ ನಿರ್ಮಲಾ ಪ್ರಾಯಶಃ ಎಳೆದು ಮನೆಗೆ ಕರೆದುಕೊಂಡು ಬಂದಿದ್ದರು. ರಾಮರಾವ್ ಅವರ ಕುಟುಂಬ ಹೀಗೆ ಹಠಾತ್ ಆಗಿ ಆದ ಘಟನೆಯಿಂದ ನೊಂದಿದ್ದರು, ಅವರ ಅಮ್ಮ ಮಗನ ಬಳಿ ಬಂದು ಹೊಡೆದಾಟದಲ್ಲಿ ಬಿದ್ದ ಪೆಟ್ಟಿನಿಂದ ಕೆಂಪಾಗಿ ಸ್ವಲ್ಪ ಊತ ಬಂದ ಅವರ ಕೈಯನ್ನು ಸವರುತ್ತಾ, ಇನ್ನು ಅವರ ಸಹವಾಸವೇ ಸಾಕು ನಾಳೆಯೇ ರಂಗನಿಗೆ ಬರಲು ಹೇಳು ಎಂದು ನಿರ್ಧಾರ ಮಾಡಿದವರಂತೆ ಹೇಳಿದಾಗ ರಾಮರಾವ್ ಕಣ್ಣಿನಿಂದ ನೀರು ಜಿನುಗಿತು.

ಹೀಗೆ ಆ ದಿನ ಬೆಂದು ಕೆಂಪಾದ ಸೂರ್ಯ ಪಶ್ಚಿಮದಲ್ಲಿ ಮುಳುಗಿ ತಂಪಾಗಿ ಮರುದಿನ ಪೂರ್ವದಲ್ಲಿ ಫ್ರೆಶ್ ಆಗಿ ಏಳುವಷ್ಟರಲ್ಲಿ ಆ ಘಟನೆ ನಡೆದು ಹೋಗಿತ್ತು. ರಾಮರಾಯರು ಸಹ ಬಹಳಷ್ಟು ಯೋಚಿಸಿ ಇವರ ಸಹವಾಸವೇ ಸಾಕು ಎಂದು ನಿರ್ಧರಿಸಿ, ಮರ ಕಡಿಯುವ ರಂಗನನ್ನು ಕರೆಸಿದ್ದರು. ಕೊನೆಯ ಬಾರಿಗೆ ಎಂಬಂತೆ ಆ ಮರಕ್ಕೆ ನೀರೆರೆದು, ಕಣ್ಣು ತುಂಬಿಕೊಂಡು ಆ ಮರಕ್ಕೆ ನಮಸ್ಕರಿಸಿದರು.

* * *

ಹಿತ್ತಲಿನ ಸಿಟೌಟ್‌ನಲ್ಲಿ ಕುಳಿತು ಸುತ್ತ ಸೊಂಪಾಗಿ

